COMMUNIQUE
Its Unique!
Volume : 23
May - 2010
Part 2
Lahari News letter for private circulation among the legal fraternity

## President inaugurates Census

President of India, Pratibha Patil inaugurated the 15th national Census on 1st April 2010 by providing details of her family members to the enumerators. The data collected in Census is a treasure house of information which helps the Government to plan its development work.

Census in India was started by British administration from 1871 to be conducted once in 10 years. After attaining freedom India enacted the Census of India Act, 1948 (Act No.37/1948) to legalise the data collection excercise.

For the first time the National Population Register (NPR) programme had been linked to the census exercise. As part of this programme, enumerators will collect finger prints, the primary identification information about individuals. The photos and the biometric data will be collected at a later date.

Primary information about individuals collected from them will eventually form the database for the building of a National Population Register (NPR).

## New rule for film certification soon

The India film certification scheme that divides films into thee categories, namely, U (Universal), A (Adults) and UA (Child to be accompanied by parent), will witness a change in coming times and we will get to watch three more types of certificated films.

The draft Cinematograph Bill, 2010, which has been presented in the on going session of the Parliament seeks to amend Cinematograph Act of 1952, drastically to bring about a sea change in all aspects of filmmaking and viewing.

While the proposed system will retain the "U" and "A", the "UA" category will be replaced by more age-specific "12+" and "15+" certification categories. The two new age-specific categories are aimed at giving certification to films on the basis of sensibilities towards language, violence, nudity and subject in various age groups. The other all together new category of film certification sought to be introduced by the Bill is "S" category. "S" films will be allowed to be watched by members of particular profession or class, depending on the nature, content and theme of the film.

According to the Bill, children below the age of three years, accompanying their parents or guardians, would be allowed to view all categories of films.

## Law on copy right awaits amendment

The Union Government has sought to amend the existing law on copy right by introducing the Copyright (Amendment) Bill, 2010. The Bill was introduced on April 19th in the Rajya Sabha by HRD Minister, Kapil Sibal.

The Bill seeks to introduce provisions for helping creative talents and more stringent punishment for copyright violations.

"The changes are in conformity with the provisions of the World Intellectual Property Organisation's WIPO Copyright Treaty (WCT) and WIPO Performances and Phonograms Treaty (WPPT)," said Sibal while introducing the Bill.

## SC gets new CJ

Exercising powers conferred by Article 124 (2) of the Constitution of India, the President is pleased to appoint Justice Sarosh Homi Kapadia, judge of the Supreme Court, to be the Chief Justice of India with effect from May 12, 2010.

The President has also promoted CJ OF Jharkhand HC Gyan Sudha Misra, CJ of Madras HC Hemant Laxman Gokhale and CJ of Bombay HC Anil Ramesh Dave to the Supreme Court.

J| Gyan Sudha Misra is the only woman judge in the SC at present.

## No belated challenge to land acquisition: SC

The Supreme Court has recently ruled that belated challenge to land acquisition proceedings can not be entertained.

"When a person challenges Section 4 Notification (land acquisition) on any ground, it should be challenged within a reasonable period and if the acquisition is challenged at a belated stage, the petition deserves to be dismissed only on this count," a bench of Justices J M Panchal and B S Chauhan said in an order.

In the present case acquisition proceedings were initiated by Haryana Govt in 2001 By end of May 2004 the proceedings were completed and compensation was disbursed. Belatedly, Swaran Lata and others challenged the acquisition claiming that they were not aware of the acquisition proceedings and award. It was claimed the notifications for acquisition were inserted by the authorities in two newspapers which did not have wide circulation . The Punjab and Haryana High Court dismissed their appeal on the ground that the challenge to the acquisition was filed after delay of over four years. Their review petitions were also dismissed, after which they had approached the apex court.

## Food Security Bill, 2010 awaits Govt's nod

One of the achievements of the present union Government, the National Food Security Bill, 2010 which assures a minimum quantity of good grains to the poor of the country is facing tough resistance within the Goverment. The Bill givers a legal right to demand 25 kg of rice or wheat for the benefit of every family below poverty level (BPL).

Those who are opposed to the Bill in the present form are arguing that the quantity of food grain fixed has no reference to nuitrition and it is much below the Supreme Court's directive to provide a minimum quality of 35 Kgs of good grain to every BPL family.

Officials of the Food Ministry, on the other hand say that the BPL population would continue to get Rs 35 kg of rice/wheat through ration shops, but would be have legal right to demand a minimum of Rs 25 kg of grain under the Act in addition thereto.

The Empowered Group of Ministers (EGoM) led by finance minister Pranab Mukherjee, to whom the Bill has been referred met on 6th April for consultation and bought more time to reach at a final conclusion.

## Astrology can not be banned : Centre takes stand

Astrology cannot be banned as it is an ancient 'science' the Union Government has said before the Bombay High Court in a PIL seeking to ban astrology. The Government's stand was disclosed in a PIL filed by one Bhagwanji Rayani, praying to ban the practice of astrology, vastu-shastra etc. The PIL also seeks action against advertisements of astrologers under the Drugs and Magic Remedies (Objectionable Advertisements) Act, 1954. The next hearing of the PIL is fixed on 23rd June.

*An empty mind is devil's workshop*

*Proverb*

Editor speaks

## Do we need long holidays?

*As usual the Courts in India are closed for summer vacation exteding to a month and in some case to more than a month. Month long summer vacation to Inidan Courts is a relic of British Raj in India. Long summer vacations in courts were designed by erstwhile British rulers to save British judges in India from severe hot weather of this country and also to facilitate them to visit their homeland in England. This practice continues in free India even after six decades of independence.*

*Do we need such a long vacation in the face of mounting arrears? Can not we cut short vacations and find more number of working days at least till the pendency is cleared? Is it not the right time to change our work culture before the system collapses under the weight of pendency?*

*The 18th Law Commission which went into this question in its 230th report has suggested cutting short vacations to increase the number of working days.*

*Long vacations are sought to be defended on the ground that lawyers and judges need vacation to `study law' and this is not possible during working days. In such a case those who `study law' at the cost of public are answerable to public on the academic progress made by them during vacations.*

## Random Reflections

In November 2009 allegations of corruption, land grabbing and abuse of office surfaced against J| Dinakaran in the media. Many representations were submitted to the Chief Justice of India opposing elevation of CJK P.D.Dinakaran as a judge of the Supreme Court. The collegium of the SC slept over the matter for more than 5 months and thereafter advised J| Dinakaran to proceed on leave. By refusing to heed the advise, J| Dinakaran has shown that the collegium has no authority to advise him to proceed on leave. It is ironical that the same collegium asked the Acting CJ of Delhi High Court J| Madan B Lokur to take over the charge of the CJ of Karnataka High Court under an illusion that J| Dinakaran would proceed on leave. After noting the defiance of J| Dinakaran and also its own limitation, the collegium recommended to transfer J| Dinakaran to Sikkim High Court as its Chief and CJ of Uttarakhand High Court J| Jagadish Singh Khehar to assumer the charge of CJ of Karnataka High Court. In a further development, J| Barin Ghosh, Chief Justice of J& K High Court has been transferred to Sikkim as its CJ. This is the development till we went to press.



K.Suryanarayana Rao
98455 29448

The persons constituting the collegium can not be presumed to be native or indiscrete while taking decision in respect of appointment, posting and transfer of Judges to the higher judiciary. It is obvious that when at the first instance collegium recommended J| Dinakaran to be elevated to the post of a judge of the Apex Court it did not screen the antecedents of the nominee. It took more than 5 months to the collegium to advice J| Dinakaran to proceed on leave knowing well that such an advice is not binding on J| Dinakaran. Even when the office of the CJ of Karnataka High Court was not vacant it is strange as to how the collegium asked J| Madan.B.Lokur to assume the charge of CJ of Karnataka High Court. When it became apparent that J| Dinkaran will not heed their advice, as a knee jerk reaction the same collegium transferred J| Dinakaran as the CJ of Sikkim High Court and transferred J| J.S.Khehar to occupy the resultant vacancy. It is another thing that J| M.B.Lokur was not willing to shift to Karnataka and the Bar Association of Sikkim High Court adopted a resolution opposing the posting of J|Dinakaran as the CJ of Sikkim High Court. The various decisions of the collegium a la J| Dinakaran show that the people at the highest level could be impetuous or even immature.

More than the fact that who is elevated to the SC and who functions as the CJ of the High Court, it is a sordid melodrama which is the exclusive creation of the collegium which has allowed the image of the Karnataka High Court sullied for such a long time. Dinakarans may come and go but the reputation of the Karnataka High Court is tarnished to such an extent that it would be impossible to restore its glory in the annals of the history of High Courts in India. Besides work in the High Court has been hampered.

It is ironical that the collegium did not consider the impact of admission of impeachment motion by the Chairman of Rajya Sabha and allowed J| Dinakaran to discharge his administrative functions. Perhaps the prevailing situation compelled the lone judge of Karnataka High Court to go to media to express his displeasure as to how J| Dinakaran could exercise administrative junctions even when he is disabled to discharge judicial functions. Failure to act appropriately at the appropriate time by the collegium in the instant case can not be condoned by right thinking persons more so by the Karnataka Bar.

## Around the Courts

***Nature and scope of Delegated Legislation-Art.245 of Constitution of India Power of Appellate Tribunal constituted under Electricity Act, 2003***

***Powers of Central Electricity Regulatory Commission constituted under CERC (Fixation of Trading Margins) Regulation, 2006***

A constitutional bench consisting of 5 judges of the SC examined the following questions of law:

- Whether the appellate tribunal constituted under the Electricity Act, 2003 has jurisdiction under Sec.111 to examine the validity of Central Electricity Regulatory Commission (Fixation of Trading Margins) Regulations, 2006 framed in exercise of power conferred under Sec. 178 of the Act?
- Whether the Parliament has conferred power of judicial review on the Appellate Tribunal for Electricity under Sec. 121 of the Act?
- Whether capping of trading margins could be done by the CERC by making a Regulation in that regard under Sec. 178 of the Act?

The SC by its verdict dated 05.03.2010 has answered the above questions in the following manner:

- The Appellate Tribunals constituted under the Electricity Act, 2003 have no authority to examine the validity of Central Electricity Regulatory Commission (FTM) Regulations.
- The Tribunal constituted under the Act has not been conferred with power of judicial review.
- CERC is empowered to cap the trading margin under the authority of delegation legislation under Sec. 178 of the Act vide notification dated 23.01.2006.

***(2010 AIR SCW 1950)***

***Land Acquisition Act, Sec. 23-Compensation-rate of, Calculation-method of, Belt method.***

The question whether the acquired lands have to be valued uniformly at the same rate, or whether different areas in the acquired lands have to be valued at different rates, depends upon the extent of the land acquired, the location, proximity to an access road/main road/ national highway or to city/town/village.

One of the methods adopted for calculation of compensation is `Belt method' whereunder different belts or tracts of lands are given different rate of compensation depending on their access to road and proximity to town. Different pieces of lands under the same belt have to receive same amount of compensation.

***(2010 AIR SCW 1997)***

# Ethics are to practice not merely to preach

## Introduction:

Writing for lawyers' on a subject like professional ethics and etiquattes is an extremely tough job and has to be accomplished with many handicaps. It is because the write up is not meant to lay men but to Advocates who are conversant, knowledgeable and capable of discretion. Secondly, the article is on a subject, which is known and dearer to all Advocates.

In general sense and meaning 'ethics' means science of morals or the rules of behavior, while 'etiquette' means the laws of courtesy, observed between members of the same profession. Ethics and etiquettes of the legal profession guard the integrity of the profession. They enhance the credibility of the profession. They give a unique position to the legal profession in the society.

Professional ethics cannot be defined and they are not a static conduct. Professional Ethics, are a combination of several circumstances. Ultimately, it is the Lawyer concerned, who has to decide for himself as to whether the purported conduct would transgress professional ethics. In one sense it is the morality and the manner in which the profession is required to be regulated by all persons, who belong to this discipline and profess themselves as Advocates. Even the society expects certain well defined conduct on the part of the Advocate.

In view of rapid industrialization, commercialization, globalization, more people have migrated from the villages to the urban centers looking for more greener pastures. With more commercial activities the demands of the civil society is also increasing. The scope of ethics is largely enlarged on account of the pressures put on the Advocates by the clients. Similarly the expectation from the Bar and the Bench is in no measure small. A combination of all these could collectively be described as professional ethics, which will *satisfy* the clients, the bar and the bench. Therefore today, lawyers have become more responsive, proactive and are over burdened by the demands made by the present day society.



*J. Rangarajan*
Advocate
*jr-rajan@dataone.in*

## Background:

According to the British history of the legal profession, in the 12th and the 13th centuries, the principles of ethics & etiquettes of the legal professionals originated in the INNS of Court in London. The the barristers are the legal ancestors of the present day Lawyers. In civil society a lawyer was regarded as an accomplished statesman. He was a devoted citizen, always concerned about public good and public welfare. Beyond these, he was ready for any personal sacrifice and the society, would look to them for guidance. The Lawyers of India during struggle for freedom and during emergency fought for the values they stood and made many personal sacrifices.

## Instances of misconduct:

Misconduct or breach of ethics can be described as a wrong doing or a wrong commission or omission with ulterior motives to make gain. It is very difficult to generalize what constitutes professional misconduct. In the three and half a decades of experience at Bar, the author has seen the following instances which the author perceives as glaring examples of professional misconduct, breaching the professional ethics.

◆ Collecting money from the clients promising to file some legal proceedings but not doing so. ◆ Taking signature on blank papers, vakalatnama to misuse them. ◆ Taking a power of attorney for managing the properties of the client and misusing the position. ◆ Inducing the clients to make a WILL naming the Advocate as the beneficiary. ◆ Inducing the clients to make a trust by appointing the advocate as the managing trustee. ◆ Charging exorbitant fees, on certain percentage on the awards passed by Motor Accidents Claims Tribunal and in Land Acquisition cases. ◆ Unauthorisedly retaining and withholding the monies of the client. ◆ Inducing clients to engage a particular Advocate to get favorable order from certain Courts. ◆ Inducing clients to pay bribe to the presiding officers of the court to get favorable orders. ◆ Collude with the officials of the court to ensure the records are misplaced. ◆ Misguiding the clients by giving false hopes in respect of a bad case. ◆ Refusing to return the brief to the party concerned. ◆ The aforesaid examples are merely illustrative and not exhaustive.

## Legal Aspect of Ethics:

The Advocates Act, is a self contained code on all issues, pertaining to ethics in the legal profession. The Bar Council of India has laid down standards of professional conduct and etiquette. The preamble to this lays down that what may be lawful and moral for an ordinary citizen and even a member of the Bar in his personal capacity, may still be improper for an advocate. An advocate should therefore, be very exemplary by his conduct. To enhance the standard of legal profession, the Bar Council of India has been empowered by Section 35 of the Advocates Act. It is strong weapon to deal with errant advocates. However, the problem is the disciplinary committee. is sometimes, a prejudiced body in as much as, it tends to shield the advocates, irrespective of the nature and the impact of the misconduct. It is said that no one could be a judge in his own cause, however the disciplinary committee, consisting of only lawyers, decides cases by becoming a judge in its own cause. To this extent the decisions of the Bar Council are not satisfactory to the public at large.

## Should we strike work?

Another very important and interesting subject is the frequent strikes called by the advocates. Strikes normally interfere with the due administration of justice. It affects our duty to the court, our duty to the opponent and our duty to the society at large. There are several ways of protest, without affecting the normal routine administration of justice.

## Factors aggravating the situation:

Corrupt bar and judiciary have aggravated the entire problem in as much as wrong doers are on the increase with less number of whistle blowers. Therefore, to borrow the expression of Henry S. Drinker, "a lawyer should consider not only his reputation but that of his profession as well". The relationship between the lawyer and his client is a relationship based on trust, it is a fiduciary relationship. The lawyer should therefore become a repository of good faith, bonafides with upright, astounding, moral fabric.

## It is every day's pledge:

To sum up let us lead an exemplary professional life and not allow few black sheeps to tarnish the image of the legal profession. Let us all take a pledge every day that we shall be loyal and sincere to the profession and play a prominent role in shaping the future of this nation.

*In the 9th annual general body meeting of Lahari Advocates Forum held on 19.02.2010, the life membership fee is enhanased to Rs.1,000/- from present fee of Rs. 500/-. Members are requested to pay the difference amount & co-operate.*

**HUMOUR**

A lawyer died and arrived at the pearly gates. To his dismay, there were thousands of people ahead of him in line to see St. Peter. To his surprise, St. Peter left his desk at the gate and came down the long line to where the laywer was, and greeted him warmly. Then St. Peter and one of his assistants took the lawyer by the hands and guided him up to the front of the line, and into a comfortable chair by his desk.

The lawyer said, "I don't mind all this attention, but what makes me so special?" St. Peter replied, "Well, I've added up all the hours for which you billed your clients, and by my calculation you must be about 193 years old!"

# ಲಹರಿ ಸಂವಾದ

ಸಂಪುಟ - ೧೦ | ಶ್ರೀ ವಿಕೃತಿ ನಾಮ ಸಂವತ್ಸರ ಅಧಿಕ ವೈಶಾಖ - ವೈಶಾಖ | ಸಂಚಿಕೆ - ೨



ಒಳಗೇನಿದೆ?

ಪುಟ ೧ : ಉಪ್ಪಿನಕಾಯಿ, ತಿಂಗಳ ಸುದ್ದಿ
ಪುಟ ೨ : ಪ್ರಚಲಿತ, ಓದುಗರ ಓಲೆ, ಅಕ್ಷರಾಂಜಲಿ
ಪುಟ ೩ : ನ್ಯಾಯಾಲಯಗಳ ಅಂಗಳದಿಂದ, ಅಂಕಣ, ಫೋಟೋ
ಪುಟ ೪ : ವ್ಯಕ್ತಿ ಪರಿಚಯ, ಸುದ್ದಿ


## ಉಪ್ಪಿನಕಾಯಿ

### ಸರ್ವೋಚ್ಛ ನ್ಯಾಯಾಲಯ: 'ಆಟಕ್ಕೆ ರಜ ಇಲ್ಲ'

ಅಕ್ಟೋಬರ್ ೨ರಿಂದ ೧೪ರ ವರೆಗೆ ದೆಹಲಿಯಲ್ಲಿ ನಡೆಯಲಿರುವ ಕಾಮನ್‌ವೆಲ್ಥ್ ಕ್ರೀಡಾಕೂಟಕ್ಕಾಗಿ ನ್ಯಾಯಾಲಯಕ್ಕೆ ರಜೆ ಘೋಷಿಸಲು ಸರ್ವೋಚ್ಛ ನ್ಯಾಯಾಲಯ ನಿರಾಕರಿಸಿದೆ.

ಸರಕಾರಿ ಕಛೇರಿ ಮತ್ತು ಕೋರ್ಟಿಗೆ ಹೋಗುವ ಜನಗಳಿಂದ ದೆಹಲಿಯ ಇಂಡಿಯಾ ಗೇಟ್‌ನ ಬಳಿ ಮುಂಜಾನೆ ಮತ್ತು ಸಂಜೆ ಸಂಚಾರಿ ದಟ್ಟಣೆ ಉಂಟಾಗುವುದರಿಂದ ದೆಹಲಿ ಸರಕಾರ ಕಛೇರಿಗಳಿಗೆ ರಜೆ ಘೋಷಿಸಿದ್ದಲ್ಲದೆ ನ್ಯಾಯಾಲಯಕ್ಕೂ ರಜ ಘೋಷಿಸುವಂತೆ ಮನವಿ ಮಾಡಿತ್ತು.

### ಗ್ರ್ಯಾಚುಯಿಟಿ ಮಿತಿ ಏರಿಕೆ

ಪೇಮೆಂಟ್ ಆಫ್ ಗ್ರ್ಯಾಚುಯಿಟಿ(ತಿದ್ದುಪಡಿ) ಮಸೂದೆ, ೨೦೧೦, ಎಪ್ರಿಲ್ ೨೧ರಂದು ಲೋಕ ಸಭೆಯಲ್ಲಿ ಮಂಡಿಸಲ್ಪಟ್ಟಿದೆ. ಗ್ರ್ಯಾಚುಯಿಟಿ ಕಾನೂನಿಗೆ ತಿದ್ದುಪಡಿ ತರಲು ಉದ್ದೇಶಿಸಿರುವ ಈ ಮಸೂದೆ, ಗ್ರ್ಯಾಚುಯಿಟಿ ಮೊತ್ತವನ್ನು ಹಾಲಿ ರೂ. ೩,೫೦,೦೦೦/- ದಿಂದ ರೂ. ೫,೦೦,೦೦೦ ಕ್ಕೆ ಏರಿಸಲಿದೆ.

### ಚೆನ್ನೈ ವಕೀಲರಿಂದ ಮತ್ತೆ ಪ್ರತಿಭಟನೆ

ಎಪ್ರಿಲ್ ೨೫ರಂದು ಚೆನ್ನೈ ವಕೀಲರು ಮುಖ್ಯಮಂತ್ರಿ ಕರುಣಾನಿಧಿ ವಿರುದ್ಧ ಪ್ರತಿಭಟನೆಯ ಘೋಷಣೆ ಕೂಗಿ ಕಪ್ಪು ಬಾವುಟ ಪ್ರದರ್ಶಿಸಿದ ಅಹಿತಕರ ಘಟನೆ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್‌ರ ಸಮ್ಮುಖದಲ್ಲಿ ನಡೆಯಿತು.

ಮದ್ರಾಸ್ ಉಚ್ಛ ನ್ಯಾಯಾಲಯದ ಅಂಗಳದಲ್ಲಿ ಬಿ.ಆರ್. ಅಂಬೇಡ್ಕರ್‌ರ ಮೂರ್ತಿಯ ಅನಾವರಣ ಕಾರ್ಯಕ್ರಮದ ಸಮಾರಂಭದ ವೇಳೆ ಈ ಘಟನೆ ನಡೆದಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಉಚ್ಛ ನ್ಯಾಯಾಲಯದ ಆವರಣದಲ್ಲಿ ವಕೀಲರ ಮೇಲೆ ನಡೆದ ಪೋಲೀಸರ ಹಲ್ಲೆಯನ್ನು ಖಂಡಿಸಿ ವಕೀಲರು ಈ ಪ್ರತಿಭಟನೆ ನಡೆಸಿದರು.

### ಕೈದಿಗಳ ಬಿಡುಗಡೆ: ಸರಕಾರ-ರಾಜ್ಯಪಾಲರಿಗಿಲ್ಲ ಸಹಮತ

ಸರಕಾರ ಬಿಡುಗಡೆ ಮಾಡಲಿಚ್ಛಿಸಿರುವ ೨೯೪ ಸಜಾ ಕೈದಿಗಳ ವಿಷಯದಲ್ಲಿ ಸರಕಾರ ಮತ್ತು ರಾಜ್ಯಪಾಲರ ಮಧ್ಯೆ ಒಮ್ಮತ ಮೂಡುತ್ತಿಲ್ಲ.

ಟಿ.ಎನ್. ಚತುರ್ವೇದಿ ರಾಜ್ಯಪಾಲರಾಗಿದ್ದಾಗಿನಿಂದ ಶುರುವಾಗಿದ್ದ ಈ ತಿಕ್ಕಾಟ ಇನ್ನೂ ಮುಂದುವರೆದಿದೆ. ಎಪ್ರಿಲ್ ಮೊದಲ ವಾರದಲ್ಲಿ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಈ ಕುರಿತು ಸರಕಾರದ ಕಡತವನ್ನು ಅಂಗೀಕರಿಸದೆ ಹಿಂದೆ ಕಳಿಸಿದ್ದಾರೆ ಎಂದು ಬಂದಿಖಾನೆ ಮಂತ್ರಿ ಹೇಳಿದ್ದಾರೆ. ಈ ಬಗ್ಗೆ ಮುಂದೇನು ಮಾಡಬೇಕೆಂದು ಸರಕಾರ ಅಡ್ವೊಕೇಟ್ ಜನರಲ್‌ರ ಅಭಿಪ್ರಾಯ ಕೇಳಲಿದೆ.

## ತಿಂಗಳ ಸುದ್ದಿ

### ನ್ಯಾ|| ದಿನಕರನ್ ವಿವಾದ: ಹೊಯ್ದಾಟದಲ್ಲಿ ಕೊಲೇಜಿಯಂ

ಇದೊಂದು ರೀತಿಯ ಸಾಂವಿಧಾನಿಕ ಬಿಕ್ಕಟ್ಟು. ಪರಿಹಾರವೆ ಇಲ್ಲದ ಬಿಕ್ಕಟ್ಟು. ಅವರ ಮಾತನ್ನು ಇವರು ಕೇಳುತ್ತಿಲ್ಲ. ಅವರಿಗೆ ಮುಂದೇನು ಮಾಡಬೇಕೆಂದು ತೋಚುತ್ತಿಲ್ಲ.

ಇದು ನ್ಯಾ|| ದಿನಕರನ್ ವಿವಾದದಿಂದ ಉದ್ಭವಿಸಿರುವ ಪರಿಸ್ಥಿತಿ. ಅವರು ಎಂದರೆ ಸರ್ವೋಚ್ಛ ನ್ಯಾಯಾಲಯದ ಕೊಲೇಜಿಯಂ.

ಎಪ್ರಿಲ್ ೩ರಂದು ವರದಿಯಾದಂತೆ ಕೊಲೇಜಿಯಂ, ನ್ಯಾ|| ದಿನಕರನ್‌ರಿಗೆ ರಜೆಯ ಮೇಲೆ ತೆರಳುವಂತೆ ಸೂಚಿಸಿತು. ಸಧ್ಯ ನ್ಯಾ|| ದಿನಕರನ್ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಆಡಳಿತಾತ್ಮಕ ಕಾರ್ಯಭಾರಗಳನ್ನಷ್ಟೇ ನಿರ್ವಹಿಸುತ್ತಿದ್ದಾರೆ. ನ್ಯಾಯಾಂಗ ಕಲಾಪಗಳಲ್ಲಿ ಪಾಲ್ಗೊಳ್ಳುತ್ತಿಲ್ಲ. ನ್ಯಾ|| ದಿನಕರನ್ ರಜೆಯ ಮೇಲೆ ತೆರಳಲಿಲ್ಲ. ಹಾಗಾಗಿ ಇಲ್ಲಿಗೆ ಮುಖ್ಯ ನ್ಯಾಯಮೂರ್ತಿಯಾಗಿ ಆಗಮಿಸಬೇಕಿದ್ದ ದೆಹಲಿ ಉಚ್ಛ ನ್ಯಾಯಾಲಯದ ನ್ಯಾ|| ಮದನ್ ಬಿ. ಲೋಕೂರ್ ಇಲ್ಲಿಗೆ ಬರಲಾಗಲಿಲ್ಲ.

ನಂತರದ ಬೆಳವಣಿಗೆಗಳು ಇನ್ನೂ ಕುತೂಹಲಕಾರಿಯಾಗಿವೆ. ನ್ಯಾ|| ದಿನಕರನ್‌ರನ್ನು ಸಿಕ್ಕಿಂ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ವರ್ಗಾಯಿಸಲಾಯಿತು. ಕರ್ನಾಟಕದಲ್ಲಿ ತೆರವಾಗಲಿರುವ ಸ್ಥಾನಕ್ಕೆ ನ್ಯಾ|| ಜಗದೀಶ್ ಸಿಂಘ್ ಖೇಹರ್‌ರನ್ನು ವರ್ಗಾಯಿಸಲಾಯಿತು. ಆದರೆ ಸಿಕ್ಕಿಂ ವಕೀಲರು ಪ್ರತಿಭಟನೆ ನಡೆಸಿ ಈ ವರ್ಗಾವಣೆಯನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದರು.

ಸಂವಿಧಾನ ನಿರ್ಮಾಪಕರು ಇಂತಹ ಜಟಿಲ ಪ್ರಸಂಗವನ್ನು ಕನಸಿನಲ್ಲಿಯೇ ಊಹಿಸಿರಲಿಕ್ಕಿಲ್ಲ. ಈ ಸಾಂವಿಧಾನಿಕ ಬಿಕ್ಕಟ್ಟು ಸಧ್ಯಕ್ಕೆ ಬಗೆಹರಿಯುವ ಲಕ್ಷಣಗಳಿಲ್ಲ.

### ದಲಿತರ ಕೊಲೆಗಡುಕರಿಗೆ ಮರಣದಂಡನೆ

೧೯೯೭ರಲ್ಲಿ ಬಿಹಾರದಲ್ಲಿ ನಡೆದ ದಲಿತರ ಮಾರಣ ಹೋಮದಲ್ಲಿ ಭಾಗಿಯಾಗಿದ್ದ ೧೬ ಕೊಲೆಗಡುಕರಿಗೆ ಪಾಟ್ನಾದ ಸೆಷನ್ಸ್ ನ್ಯಾಯಾಲಯವೊಂದು ಮರಣದಂಡನೆ ವಿಧಿಸಿದೆ. ಇದಲ್ಲದೆ ಇನ್ನು ೧೦ ಆಪಾದಿತರಿಗೆ ಜೀವಾವಧಿ ಸೆರೆಮನೆವಾಸ ಮತ್ತು ತಲಾ ರೂ. ೫೦,೦೦೦/-ಗಳ ದಂಡ ವಿಧಿಸಿದೆ.

೧ನೇ ಡಿಸೆಂಬರ್ ೧೯೯೭ರಂದು ಬಿಹಾರಿನ ಜೆಹಾನ್‌ಬಾದ್‌ನಲ್ಲಿ ಮೇಲ್ಜಾತಿಯ ರಣಬೀರ್ ಸೇನೆಯ ಸುಮಾರು ೧೦೦ ಜನ ಬಂದೂಕುಧಾರಿಗಳು ದಲಿತರ ಗುಡಿಸಿಲಿಗೆ ನುಗ್ಗಿ ಮಲಗಿದ್ದ ೨೭ ಹೆಂಗಸರು ಮತ್ತು ೧೬ ಮಕ್ಕಳು ಸೇರಿದಂತೆ ೫೮ ಜನರನ್ನು ಗುಂಡು ಹಾರಿಸಿ ಕೊಂದಿದ್ದರು. ಜಾತಿ ವೈಷಮ್ಯ ಘಟನೆಗೆ ಕಾರಣವೆಂದು ಆಪಾದಿಸಲಾಗಿತ್ತು.

ಈ ಮೊದಲು ೧೯೯೯ರಲ್ಲಿ ಜೆಹಾನಾಬಾದ್‌ನಲ್ಲಿ ನಿಷ್ಪಕ್ಷಪಾತ ವಿಚಾರಣೆ ಸಾಧ್ಯವಿಲ್ಲವೆಂದು ಬಿಹಾರ್ ಉಚ್ಛ ನ್ಯಾಯಾಲಯ ಮೊಕದ್ದಮೆಯನ್ನು ಪಾಟ್ನಾಕ್ಕೆ ವರ್ಗಾಯಿಸಿತ್ತು.

### 'ವಕೀಲರ ಫೀ ಕೊಡಲು ದುಡ್ಡಿಲ್ಲ. ನನ್ನ ಕಿಡ್ನಿ ಮಾರಲು ಅನುಮತಿ ಕೊಡಿ' ಕೈದಿ.

'ವಕೀಲರ ಶುಲ್ಕ ಕೊಡಲು ನನ್ನ ಬಳಿ ದುಡ್ಡಿಲ್ಲ. ನನ್ನ ಕಿಡ್ನಿ ಮಾರಿ ಹಣ ಸಂಗ್ರಹಿಸಬೇಕಿದೆ ಕಿಡ್ನಿ ಮಾರಲು ಅನುಮತಿ ಕೊಡಿ'. ಹೀಗೆಂದು ನ್ಯಾಯಾಲಯಕ್ಕೆ ಬೇಡಿಕೆ ಇಟ್ಟ ಮರಣ ದಂಡನೆಗೆ ಗುರಿಯಾದ ಕೈದಿಯೊಬ್ಬ ಎಲ್ಲರನ್ನು ಕ್ಷಣಕಾಲ ದಂಗು ಮಾಡಿದ್ದಾನೆ.

ಈ ಘಟನೆ ನಡೆದದ್ದು ಮುಂಬೈ ಉಚ್ಛ ನ್ಯಾಯಾಲಯದಲ್ಲಿ. ಹೀಗೆ ಬೇಡಿಕೆ ಇಟ್ಟ ಕೈದಿ ೪೭ ವರ್ಷದ ಮೊಹಮ್ಮದ್ ಹನೀಫ್ ಸಯ್ಯದ್. ಸಯ್ಯದ್‌ಗೆ ಮುಂಬೈನ ಪೋಟಾ ನ್ಯಾಯಾಲಯ ಭಯೋತ್ಪಾದಕ ಕೃತ್ಯಕ್ಕಾಗಿ ಮರಣ ದಂಡನೆ ವಿಧಿಸಿದೆ.

ಸಧ್ಯ ಯರವಾಡ ಕೇಂದ್ರ ಕಾರಾಗೃಹದಲ್ಲಿರುವ ಸಯ್ಯದ್, ಮುಂಬೈ ಉಚ್ಚ ನ್ಯಾಯಾಲಯದಲ್ಲಿ ಮರಣ ದಂಡನೆಯ ವಿರುದ್ಧ ಅಪೀಲು ಸಲ್ಲಿಸಿದ್ದು, ಅಪೀಲನ್ನು ಮುನ್ನಡೆಸಲು ತನ್ನ ವಕೀಲರಿಗೆ ಶುಲ್ಕ ಪಾವತಿ ಮಾಡಲು ಹಣವಿಲ್ಲದ್ದರಿಂದ ಇಂತಹ ಬೇಡಿಕೆ ಇಟ್ಟಿದ್ದಾಗಿ ಹೇಳಿದ್ದಾನೆ.

ಇಂತಹ ಬೇಡಿಕೆಯನ್ನು ವಿರೋಧಿಸಿದ ಹೆಚ್ಚುವರಿ ಅಭಿಯೋಜಕ, ದೇಶಮುಖ್ ಈ ಬೇಡಿಕೆ ನ್ಯಾಯಾಲಯದ ಕಾರ್ಯವ್ಯಾಪ್ತಿಯ ಹೊರಗಿರುವುದರಿಂದ ಅದನ್ನು ಪರಿಗಣಿಸುವ ಅವಶ್ಯಕತೆ ಇಲ್ಲ ಎಂದು ವಾದಿಸಿದರು.

ನ್ಯಾಯಮೂರ್ತಿಗಳಾದ ಡಿ.ಬಿ. ಭೋಸ್ಲೆ ಮತ್ತು ಎ.ಆರ್. ಜೋಷಿ, ಬೇಡಿಕೆಯನ್ನು ತಿರಸ್ಕರಿಸಿ ಕಿಡ್ನಿ ಮಾರಲು ಕಾನೂನಿನಲ್ಲಿ ಅನುಮತಿ ಇಲ್ಲ, ಆದರೆ ಕೈದಿ ಇಚ್ಛಿಸಿದರೆ ದಾನ ಮಾಡಬಹುದೆಂದು ಅಭಿಪ್ರಾಯ ಪಟ್ಟರು.

ಈ ಘಟನೆಯಿಂದ ನೊಂದವರು ಕೈದಿಯ ವಕೀಲ ಖಾನ್ ಅಬ್ದುಲ್ ವಹಾಬರು. "ನನಗೆ ಈ ಬೇಡಿಕೆಯಿಂದ ನೋವಾಗಿದೆ. ನನ್ನ ಖರ್ಚಿನಲ್ಲಿ ಅಪೀಲು ಸಲ್ಲಿಸಿ ಶುಲ್ಕ ರಹಿತವಾಗಿ ಈ ಅಪೀಲು ನಡೆಸುತ್ತಿದ್ದೇನೆ. "ನಾನು ನನ್ನ ಪಕ್ಷಗಾರನಿಗೆ ಎಂದೂ ಶುಲ್ಕ ಕೇಳಿಲ್ಲ. ಅವನಿಗೆ ಬೇರೆ ಯಾವುದೇ ಉದ್ದೇಶಕ್ಕೆ ದುಡ್ಡು ಬೇಕಾಗಿರ ಬಹುದು," ಎಂದಿದ್ದಾರೆ ವಹಾಬ್ ವಕೀಲರು. ನೊಂದ ವಕೀಲರು ಅಪೀಲಿನಿಂದ ಹಿಂದೆ ಸರಿಯುವ ತೀರ್ಮಾನ ತೆಗೆದು ಕೊಂಡಿದ್ದಾರೆ..

ಪ್ರಚಲಿತ

# ಜನಗಣತಿ

ಅರವಿಂದ ಎಂ. ನೆಗಳೂರ
aravindneglur@gmail.com

ವಿಶ್ವದಲ್ಲೆ ಅಂಕಿಸಂಖ್ಯೆಗಳ ಅತಿ ದೊಡ್ಡ ಪ್ರಮಾಣದ ಸಂಗ್ರಹಣೆ ಎಂದರೆ ಭಾರತದ ಜನಗಣತಿ. ಭಾರತದಲ್ಲಿ ಪ್ರತಿ ೧೦ ವರ್ಷಗಳಿಗೊಮ್ಮೆ ಜರಗುವ ಜನಗಣತಿ ಜಗತ್ತಿನಲ್ಲೆ ಅತ್ಯಂತ ಬೃಹದಾಕಾರದ ಅಂಕಿ ಸಂಖ್ಯೆಗಳ ಸಂಗ್ರಹದ ಕಾರ್ಯಚಟುವಟಿಕೆ ಎಂದು ಪರಿಗಣಿಸಲ್ಪಟ್ಟಿದೆ. ಭಾರತದ ಸುಮಾರು ೧.೮ ಬಿಲಿಯನ್ ಜನಗಳ ತಲೆ ಎಣಿಸುವುದೆಂದರೆ ಹುಡುಗಾಟವೆ? ವಿಶ್ವದಾದ್ಯಂತದ ಯಾವುದೇ ಚಟುವಟಿಕೆಗೆ ಹೋಲಿಸದಿದ್ದರೂ ಭಾರತದ ಜನಗಣತಿ ತನ್ನಷ್ಟಕ್ಕೆ ತಾನೆ ಅತಿ ವಿಶಿಷ್ಟವಾದ, ಈಗ ತಾನೆ ಜನಿಸಿದ ಮಗುವಿನಿಂದ, ಇನ್ನೇನು ಸಾಯಲಿರುವ ವೃದ್ಧರವರೆಗೆ ಪ್ರತಿಯೊಬ್ಬರನ್ನೂ ಒಳಗೊಳ್ಳುವ ಭಾರತ ಸರ್ಕಾರದಿಂದ ನಿಯಂತ್ರಿಸಲ್ಪಡುವ ಚಟುವಟಿಕೆಯಾಗಿದೆ.

ಈ ಶತಮಾನದ ಎರಡನೆ ಜನಗಣತಿ ಈ ವರ್ಷದ ಏಪ್ರಿಲ್ ೧ರಿಂದ ಪ್ರಾರಂಭವಾಗಿದೆ. ರಾಷ್ಟ್ರಪತಿ, ಪ್ರತಿಭಾ ಪಾಟೀಲ್ ತಮ್ಮ ಕುಟುಂಬದ ವಿವರಗಳನ್ನು ನೀಡುವ ಮೂಲಕ ಈ ಬೃಹತ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಭಾರತದ ಯಾವುದೆ ಜನಾಂಗ ಅಥವಾ ಒಂದಿಷ್ಟು ಜನ ಸಮುದಾಯ ಗಣತಿಗೊಳಪಡಲು ಒಪ್ಪದಿದ್ದರೆ? ಗಣತಿ ನಡೆಸುವ ಅಂಕಿ ಸಂಖ್ಯೆಗಳ ಸಂಗ್ರಹಕಾರರೆ ತಪ್ಪು ತಪ್ಪು ವಿವರಗಳನ್ನು ಬರೆದುಕೊಂಡರೆ? ಎಲ್ಲ ಸರಿಯಾಗಿ ನಡೆದು ಗಣತಿ ಪೂರ್ಣಗೊಂಡ ನಂತರ ಲಭಿಸಿರುವ ಅಂಕಿ ಸಂಖ್ಯೆಗಳನ್ನೇನು ಮಾಡುತ್ತಾರೆ? ಅವುಗಳ ಉಪಯೋಗವೇನು? ಇಂಥ ಗಣತಿಗೆ ಕಾನೂನಿನ ಮಾನ್ಯತೆ ಏನಾದರೂ ಇದೆಯೆ? ಭಾರತದಲ್ಲಿ ಜನಗಣತಿ ಪ್ರಾರಂಭವಾಗಿದ್ದು ಯಾವಾಗ? ಇವಲ್ಲವೆ ನಿಮ್ಮ ಪ್ರಶ್ನೆಗಳು? ಉತ್ತರಗಳಿಲ್ಲಿವೆ ನೋಡಿ:

ಇಂಥ ಜನಗಣತಿಗೆ ಕಾನೂನಿನ ಮಾನ್ಯತೆ ಇದೆ. ೧೯೪೮ರಲ್ಲಿ ಭಾರತ ಸರ್ಕಾರ ಜಾರಿಗೊಳಿಸಿದ The Census Act, 1948 (Act No. 37/1948) ಎಂಬ ಕಾಯ್ದೆಯಡಿಯಲ್ಲಿ ಜನಗಣತಿ ನಡೆಸಲಾಗುತ್ತದೆ. ಈ ಕಾನೂನನ್ನು ಬಲಪಡಿಸುವ ದೃಷ್ಟಿಯಿಂದ ೧೯೭೮ ಮತ್ತು ೧೯೯೪ರಲ್ಲಿ ತಿದ್ದುಪಡಿ ಮಾಡಿ ಹೊಸ ಉಪಬಂಧಗಳನ್ನು ಮೂಲ ಕಾಯ್ದೆಗೆ ಸೇರಿಸಲಾಗಿದೆ.

೧ ರಿಂದ ೧೭ ಸೆಕ್ಷನ್‌ಗಳಿರುವ ಈ ಕಾಯ್ದೆ ಭಾರತ ದೇಶದ ಸಮಗ್ರ ಜನಗಣತಿಗೆ ಅವಕಾಶ ಮಾಡಿಕೊಡುತ್ತದೆ. ಸೆನ್ಸಸ್ ಕಮಿಷ್ನರ್‌ರಿಂದ ನಿಯುಕ್ತರಾದ ಅಂಕಿ ಸಂಖ್ಯೆ ಸಂಗ್ರಹಕಾರರು (Enumerators) ಕೇಳುವ ಪ್ರಶ್ನೆಗೆ ಪ್ರತಿ ವ್ಯಕ್ತಿಯೂ ಸತ್ಯವಾಗಿ ಉತ್ತರಿಸಲೇಬೇಕು (ಸೆ. ೮). ಸಂಗ್ರಹಕಾರನು ಅಂಕಿ ಸಂಖ್ಯೆಯ ಸಂಗ್ರಹಕ್ಕಾಗಿ ಯಾವುದೆ ಮನೆ, ಕಟ್ಟಡ, ವಾಹನವನ್ನು ಪ್ರವೇಶಿಸಿ ತನ್ನ ಕಾರ್ಯ ನಿರ್ವಹಿಸಬಹುದಾಗಿದೆ (ಸೆ. ೯). ಜನಗಣತಿ ಕೆಲಸಕ್ಕೆ ನಿಯುಕ್ತಿಗೊಂಡವರು ಕರ್ತವ್ಯ ನಿರ್ವಹಿಸದಿದ್ದರೆ, ಸಂಗ್ರಹಿಸಿದ ಅಂಕಿ ಸಂಖ್ಯೆಗಳನ್ನು ಅನಧಿಕೃತವಾಗಿ ಬೇರೆಯವರಿಗೆ ಬಿಡುಗಡೆ ಮಾಡಿದರೆ, ಸಂಗ್ರಹಕಾರ ಸಂಗ್ರಹಿಸಿದ ಮಾಹಿತಿಯನ್ನು ವಿರೂಪಗೊಳಿಸಿದರೆ ಅಥವಾ ಬಚ್ಚಿಟ್ಟರೆ ಅಥವಾ ಅಳಿಸಿದರೆ ಅಥವಾ ಸಂಗ್ರಹಕಾರರಿಗೆ ಯಾರಾದರೂ ಉತ್ತರಿಸಲು ನಿರಾಕರಿಸಿದರೆ ಅಥವಾ ತಪ್ಪು ಮಾಹಿತಿ ಕೊಟ್ಟರೆ, ಮನೆ ಅಥವಾ ಕಟ್ಟಡದ ಯಜಮಾನ ಸಂಗ್ರಹಕಾರರನ್ನು ಮನೆಯನ್ನು ಪ್ರವೇಶಿಸದಂತೆ ತಡೆದರೆ ಅಂತಹ ಕೃತ್ಯಗಳನ್ನು ಅಪರಾಧ ಎಂದು ಪರಿಗಣಿಸಿ ನ್ಯಾಯಾಲಯ ೧೦೦೦ ರೂಪಾಯಿಗಳವರೆಗೆ ದಂಡ ವಿಧಿಸಬಹುದಾಗಿದೆ.

ಜನಗಣತಿಯಲ್ಲಿ ಸಂಗ್ರಹಿಸಿದ ಅಂಕಿ ಅಂಶ ಸರಕಾರಕ್ಕೆ ಒಂದು ಅತ್ಯುಪಯುಕ್ತ ಮಾಹಿತಿಗಳ ಖಜಾನೆ. ಸರಕಾರದ ಧೋರಣೆ, ನೀತಿ ನಿರೂಪಣೆಯನ್ನು ರೂಪಿಸುವವರಿಗೆ ಈ ಅಂಕಿ ಸಂಖ್ಯೆಯೊಂದು ದಾರಿ ದೀಪ. ಬಡತನದ ರೇಖೆಯ ಕೆಳಗಿರುವವರೆಷ್ಟು ಜನ, ಸರಕಾರದ ಜನಕಲ್ಯಾಣ ಯೋಜನೆಗಳ ಫಲ ಪಡೆದವರೆಷ್ಟು ಜನ, ಕುಟುಂಬ ಯೋಜನೆ ಜಾರಿಯಾಗಿರುವುದೆಲ್ಲಿ. ವಿಫಲವಾಗಿರುವುದೆಲ್ಲಿ, ತೆರಿಗೆ ಕೊಡುವ ಜನರೆಷ್ಟು, ಮಾಹಿತಿ ತಂತ್ರಜ್ಞಾನದ ಆವಿಷ್ಕಾರಗಳಾದ ದೂರವಾಣಿ, ಇಂಟರ್‌ನೆಟ್ ತಲುಪಿರುವುದೆಷ್ಟು ಜನರನ್ನು, ಯಾವ ಯಾವ ಧರ್ಮೀಯರ ಶೇಕಡಾವಾರು ಜನಸಂಖ್ಯೆಯ ಪ್ರಮಾಣವೇನು? ಜನಗಳ ತಲಾ ಆದಾಯವೇನು? ಇಂತಹ ಹಲವು ವಿವರಗಳು ಜನಗಣತಿಯಿಂದ ಲಭ್ಯ. ಲಭ್ಯ ವಿವರಗಳನ್ನಾಧರಿಸಿ ಸರಕಾರ ತನ್ನ ಮುಂದಿನ ಧೋರಣೆ (Policy) ಯನ್ನು ರೂಪಿಸಿಕೊಳ್ಳಲು ಅನುಕೂಲ.

ಇಂಗ್ಲೆಂಡಿನಲ್ಲಿ The Census Act, 1880 ಯಂತೆ ೧೮೮೦ರಿಂದ ಜನಗಣತಿ ಪ್ರಾರಂಭವಾಯಿತು. ಅದನ್ನು ಇಂಗ್ಲೇಂಡಿನಲ್ಲಿ The population, Act, 1880 ಎಂದೂ ಕರೆಯುತ್ತಾರೆ.

ಭಾರತದಲ್ಲಿ ಪ್ರಪ್ರಥಮ ಜನಗಣತಿ ನಡೆದದ್ದು ೧೮೭೧ರಲ್ಲಿ ಆ ವರ್ಷದಿಂದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ಜನಗಣತಿಯನ್ನು ಎರಡು ಹಂತದಲ್ಲಿ ನಡೆಸಲಾಗುತ್ತದೆ. ಮೊದಲನೆ ಹಂತದಲ್ಲಿ ಮನೆ, ಜನವಸತಿ ಕಟ್ಟಡ ಅಥವಾ ಗುಡಿಸಲುಗಳ ಸಂಖ್ಯೆಯನ್ನು ನಮೂದಿಸಿಕೊಳ್ಳುವುದು. ಎರಡನೆ ಹಂತದಲ್ಲಿ ಜನಸಂಖ್ಯೆಯ ಎಣಿಕೆ. ಹೀಗೆ ಮಾಡುವುದರಿಂದ ತಲೆ ಎಣಿಕೆಯಲ್ಲಿ ಆಗುವ ತಪ್ಪುಗಳನ್ನು ಕಡಿಮೆ ಮಾಡಬಹುದು.

**ಗಮನಿಸಿ :**

೧. ತೃತೀಯ ಲಿಂಗಗಳು (ಮಂಗಳ ಮುಖಿಯರು) ತಮ್ಮ ಲಿಂಗ ದಾಖಲಿಸಲು ಅವಕಾಶವಿಲ್ಲ. ಜನಗಣತಿ ದಾಖಲೆ ಗುರುತಿಸುವುದು ಗಂಡು ಮತ್ತು ಹೆಣ್ಣು ಮಾತ್ರ.

೨. ಜನಗಣತಿಗೂ ರಾಷ್ಟ್ರೀಯತೆಗೂ ಸಂಬಂಧವಿಲ್ಲ. ಇದು ಭಾರತೀಯರ ಜನಗಣತಿಯ ಮಾತ್ರವಲ್ಲ. ಭಾರತದಲ್ಲಿರುವ ವಿದೇಶಿಯರನ್ನು ಎಣಿಕೆ ಮಾಡಲಾಗುತ್ತದೆ.

೩. ಭಾರತದ ಗುರುತು ಪ್ರಾಧಿಕಾರ ಕೊಡಲಿರುವ ಗುರುತಿನ ಚೀಟಿಗೂ ಜನಗಣತಿಗೂ ಸಂಬಂಧವಿಲ್ಲ. ಗುರುತಿನ ಚೀಟಿ ಭಾರತದ ಪೌರರಿಗೆ ಮಾತ್ರ. ಜನಗಣತಿಯಲ್ಲಿ ವಿದೇಶಿಯರೂ ಎಣಿಕೆಯಾಗುತ್ತಾರೆ.

---

## ಓದುಗರ ಓಲೆ

### ಅನೈತಿಕ ಸಂಬಂಧಗಳಿಗೆ ಕಾನೂನಿನ ಮಾನ್ಯತೆಯೆ?

ಮಾರ್ಚ್ ತಿಂಗಳಲ್ಲಿ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ವಿವಾಹಪೂರ್ವ ಲೈಂಗಿಕ ಸಂಬಂಧಗಳ ಬಗ್ಗೆ ನ್ಯಾಯಾಲಯದಲ್ಲಿ ಆಡಿದರೆನ್ನಲಾದ ಮಾತೊಂದು ಇಂತಹ ಸಂಬಂಧಗಳಿಗೆ ಕಾನೂನಿನ ಮುದ್ರೆ ದೊರೆತಿದೆ ಎಂಬರ್ಥ ಬರುವಂತೆ ರಾಷ್ಟ್ರವ್ಯಾಪಿ ಬಿಂಬಿಸಲಾಯಿತು. ಪ್ರಮುಖ ಪತ್ರಿಕೆಗಳಲ್ಲದೆ ಪ್ರತಿಷ್ಠಿತ ಟಿವಿ ವಾಹಿನಿಗಳು ಕೂಡ ಹೀಗೆ ಪ್ರಸಾರ ಮಾಡಿದವು. ನಂತರ ನೋಡಿದರೆ ಅದು ನ್ಯಾಯಾಧೀಶರ ಮಾತಷ್ಟೆ ತೀರ್ಪಲ್ಲ ಎಂದು ತಿಳಿಯಿತು. ಈ ಕುರಿತಂತೆ ಎಪ್ರಿಲ್ ತಿಂಗಳ ಕಮ್ಯುನಿಕ್‌ನಲ್ಲಿನ ಸುದ್ದಿ ವಿಶ್ಲೇಷಣೆ ಓದುಗರ ಕಣ್ಣು ತೆರೆಸುವಂತಿತ್ತು.

ನ್ಯಾಯಾಲಯದ ನಡವಳಿಕೆಗಳನ್ನು ವರದಿ ಮಾಡುವ ಪತ್ರಕರ್ತರ ಅಜ್ಞಾನ ಎದ್ದು ಕಾಣುವಂತಿರುತ್ತದೆ. ಅವರಿಗೆ ಕೋರ್ಟಿನಲ್ಲಿ ಸಾಮಾನ್ಯವಾಗಿ ಆಡುವ ಮಾತು ಮತ್ತು ಕೋರ್ಟಿನ ತೀರ್ಮಾನಕ್ಕೆ ವ್ಯತ್ಯಾಸ ತಿಳಿಯದಿರುವುದು ಖೇದಕರ.

ಇಂತಹ ಪತ್ರಕರ್ತರನ್ನು ತರಬೇತು ಮಾಡಲೆಂದೆ 'ಲಹರಿ' ಜರ್ನಲಿಸ್ಟ್ ಗಿಲ್ಡ್ ಎಂಬ ವಿಭಾಗವನ್ನು ಪ್ರಾರಂಭಿಸಿತ್ತು ಎಂದು ಕೇಳಿದ್ದೆ. ಅದೇನಾಯಿತು?

**–ಶೃ.ನ. ರವೀಂದ್ರ , ವಕೀಲರು, ಬೆಂಗಳೂರು**

*(ಈ ವಿಭಾಗವೀಗ ಸಧ್ಯಕ್ಕೆ ಕಾರ್ಯ ನಿರ್ವಹಿಸುತ್ತಿಲ್ಲ. ಅದನ್ನು ಪುನಃ ಪ್ರಾರಂಭಿಸುವ ಕುರಿತಂತೆ ಲಹರಿಯ ಹೊಸ ಆಡಳಿತಗಾರರು ಸಧ್ಯದಲ್ಲಿಯೆ ತೀರ್ಮಾನ ತೆಗೆದುಕೊಳ್ಳಲಿದ್ದಾರೆ. – ಸಂ.)*

---

# ಕನ್ನಡ ಕಟ್ಟಾಳು ಶರ್ಮಾರಿಗೆ ಅಕ್ಷರಾಂಜಲಿ

ವಿ.ಪದ್ಮನಾಭ ಕೆದಿಲಾಯ
ವಕೀಲರು
sudinno@yahoo.com
೯೪೪೮೦೭೫೫೯೨



ವೈ.ಎಂ.ಸಿ. ಶರ್ಮಾ

ವಕೀಲ, ನಿಷ್ಪಕ್ಷಪಾತ ನ್ಯಾಯಾಧೀಶ, ಸಮರ್ಥ ಆಡಳಿತಗಾರ, ಉತ್ತಮ ಸಂಘಟಕ, ಕಾನೂನು ತಜ್ಞ, ಪದಕೋಶ ರಚನಾಕಾರ, ಸಂಧಾನಕಾರ, ಹೀಗೆ ಹಲವಾರು ಅವತಾರಗಳಲ್ಲಿ ಹತ್ತಿರ-ಹತ್ತಿರ ೬ ದಶಕಗಳ ಉಪಯುಕ್ತ ಪಾತ್ರ ನಿರ್ವಹಿಸಿದ ಡಾ। ವೈ.ಎಂ.ಸಿ. ಶರ್ಮಾ ನೇಪಥ್ಯಕ್ಕೆ ಸಂದಿದ್ದಾರೆ.

೧೮.೦೩.೨೦೦೯ರಂದು ಇನ್ನಿಲ್ಲವಾದ ಕೋಲಾರದವರಾದ ವೈ. ಮುನೇಶ್ವರ ಚಂದ್ರಶೇಖರ ಶರ್ಮಾ ವಕೀಲರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದ್ದು ಬೆಂಗಳೂರಿನಲ್ಲಿ. ಹಲವು ವರ್ಷಗಳ ಕಾಲದ ವಕಾಲತ್ತಿನ ನಂತರ ಶರ್ಮಾ, ೧೯೫೪ರಲ್ಲಿ ಮುನ್ಸಿಫ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದು ಮುನ್ಸಿಫ್ ಮ್ಯಾಜಿಸ್ಟ್ರೇಟ್ ರಾದರು. ಹಂತ ಹಂತವಾಗಿ ಮುಂಬಡ್ತಿ ಪಡೆದ ಶರ್ಮಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದರು. ೧೯೭೩ರಲ್ಲಿ ನಿವೃತ್ತಿಯ ವೇಳೆ ಕರ್ನಾಟಕ ರಾಜ್ಯ ವಿಜಿಲೆನ್ಸ್ ಕಮಿಷನ್ನಿನಲ್ಲಿ ಡೆಪ್ಯುಟಿ ಡೈರೆಕ್ಟರ್ ಆಗಿದ್ದರು.

ಶರ್ಮಾ ೧೯೭೭ರಿಂದ ೧೯೮೪ರವರೆಗೆ ಕರ್ನಾಟಕ ರಾಜ್ಯ ಅಧಿಕೃತ ಭಾಷಾ ಕಮಿಷನ್ನಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಇಂಗ್ಲೀಷಿನಿಂದ ಸಾವಿರಾರು ಕಾಯ್ದೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅವರ ಅವಧಿಯಲ್ಲಿಯೆ ೪೦೦೦೦ ಶಬ್ದಗಳ ಇಂಗ್ಲೀಷ್ – ಕನ್ನಡ ಕಾನೂನು ಪದಕೋಶ ಸಿದ್ಧಗೊಂಡಿತು. ಇಂದು ನ್ಯಾಯಾಲಯಗಳಲ್ಲೇನಾದರೂ ಕಸ್ತೂರಿ ಕನ್ನಡ ಅಲ್ಪ ಸ್ವಲ್ಪ ಕಂಪು ಸೂಸುತ್ತಿದ್ದರೆ ಅದರ ಹಿಂದಿರುವವರು ವೈ.ಎಂ.ಸಿ. ಶರ್ಮಾ.

೧೯೮೪ರಿಂದ ೨೦೦೪ರ ವರೆಗೆ ಎರಡು ದಶಕಗಳ ಕಾಲ ಲೋಕ ಅದಾಲತ್‌ನಲ್ಲಿ ಸಾವಿರಾರು ವಿವಾದಗಳನ್ನು ಇಬ್ಬರೂ ಪಕ್ಷಗಾರಿಕೆಗೆ ಒಪ್ಪಿಗೆಯಾಗುವಂತೆ ನಿರ್ವಹಿಸಿದ ಶರ್ಮಾ ಇದಕ್ಕೆ ಪಡೆದ ಸಂಭಾವನೆ ಎಷ್ಟು ಗೊತ್ತೆ? ಸಿಟಿಂಗ್ ಫಿ ಎಂದು ಪ್ರತಿ ಮಿಟಿಂಗಿಂತ ಕೇವಲ ನೂರು ರೂಪಾಯಿ.

೨೮.೦೧.೨೦೦೯ರಂದು ಮಂಗಳೂರು ವಿಶ್ವವಿದ್ಯಾಲಯ. 'ನ್ಯಾಯಾಂಗಕ್ಕೆ, ಕಾನೂನಿನ ಕ್ಷೇತ್ರಕ್ಕೆ, ಮತ್ತು ಅನುವಾದದ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆ'ಯನ್ನು ಗುರುತಿಸಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿತ್ತು. ಶರ್ಮಾ ದೆಹಲಿಯ ಇಂಡಿಯನ್ ಲಾ ಇನ್ಸ್ಟಿಟ್ಯೂಟಿನ ಸದಸ್ಯರೂ ಆಗಿದ್ದರು. ನಿವೃತ್ತ ನ್ಯಾಯಾಂಗ ಅಧಿಕಾರಿಗಳ ಸಂಘದ ನಿಯಮಾವಳಿಗಳನ್ನು ರಚಿಸಿದ್ದರು.

ಶರ್ಮಾ ಕೆಲ ಕಾಲ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಯೂ ಆಗಿದ್ದರು. ಅಜಾತ ಶತ್ರುವಾಗಿದ್ದ ಶರ್ಮಾರಿಗಿದು ಅಕ್ಷರಾಂಜಲಿ.

## ನ್ಯಾಯಾಲಯಗಳ ಅಂಗಳದಿಂದ

***ನಿರ್ದಿಷ್ಟ ಪರಿಹಾರ ಅಧಿನಿಯಮ ೧೯೬೩ (Specific Relief Act) ಸೆ. ೬–ತಕ್ಷಣದ ಸ್ವಾಧೀನಕ್ಕಾಗಿ ದಾವಾ– ಯಾರೆಲ್ಲ ಪರಿಹಾರ ಕೇಳಲು ಅರ್ಹರು? ಈ ಕಾನೂನಿನಡಿ ಸ್ವಾಧೀನ (possession) ಎಂದರೇನು?***

ಸೆ. ೬ – ನಿರ್ದಿಷ್ಟ ಪರಿಹಾರ ಅಧಿನಿಯಮದಡಿ ಸ್ವತ್ತಿನ ಸ್ವಾಧೀನದಲ್ಲಿದ್ದ ವ್ಯಕ್ತಿಯನ್ನು ಬೇರೆಯವರು ಕಾನೂನು ಬಾಹಿರವಾಗಿ ಸ್ವತ್ತಿನಿಂದ ಹೊರಹಾಕಿದರೆ ಅಂತಹ ವ್ಯಕ್ತಿ ಸ್ವಾಧೀನವನ್ನು ಮರಳಿ ಪಡೆಯಲು ದಾವಾ ಹೂಡಬಹುದಾಗಿದೆ.

ಇಂತಹ ದಾವಾ ಯಾರು ಮಾಡಬಹುದು ಮತ್ತು ಈ ಕಾಯ್ದೆಯಡಿ 'ಸ್ವಾಧೀನ' ಪದದ ಅರ್ಥವ್ಯಾಪ್ತಿಯೇನು ಎಂಬ ಎರಡು ಪ್ರಶ್ನೆಗಳು ಈ ವರ್ಷದ ಫೆಬ್ರುವರಿಯಲ್ಲಿ ಸರ್ವೋಚ್ಚ ನ್ಯಾಯಲಯದ ಮುಂದೆ ಬಂದವು.

ಈ ಪ್ರಶ್ನೆಗಳಿಗೆ ನ್ಯಾಯಾಲಯ ಕೆಳಕಂಡಂತೆ ಉತ್ತರಿಸಿದೆ.

❖ ಸ್ವಾಧೀನವೆಂದರೆ ಭಾವಿತ ಸ್ವಾಧೀನವಲ್ಲ (constructive possession), ಬದಲಾಗಿ ಪ್ರತ್ಯಕ್ಷ ಸ್ವಾಧೀನ(phisical possession).

❖ ಪ್ರತ್ಯಕ್ಷ ಸ್ವಾಧೀನದಿಂದ ಯಾವ ವ್ಯಕ್ತಿ ಹೊರ ಹಾಕಲ್ಪಟ್ಟಿರುತ್ತಾನೊ, ಅಂಥ ವ್ಯಕ್ತಿ ೬ ತಿಂಗಳೊಳಗೆ ಪ್ರತ್ಯಕ್ಷ ಸ್ವಾಧೀನವನ್ನು ಮರಳಿ ಪಡೆಯಲು ಸೆ.೬ರಂತೆ ದಾವಾ ಹೂಡಬಹುದು.

❖ ಅಕಸ್ಮಾತ್ ಬಾಡಿಗೆದಾರನನ್ನು ಮಾಲಿಕನಲ್ಲದ ವ್ಯಕ್ತಿ, ಪ್ರತ್ಯಕ್ಷ ಸ್ವಾಧೀನದಿಂದ ಹೊರಹಾಕಿದರೆ ಸೆ.೬ ರಂತೆ ದಾವಾ ತರಬಹುದು. ಇಂತಹ ದಾವಾಕ್ಕೆ ಸ್ವತ್ತಿನ ಮಾಲೀಕ ಅವಶ್ಯಕ ಪಾರ್ಟಿ ಅಲ್ಲ.

*(೨೦೧೦ ಎಐಆರ್ ಎಸ್.ಸಿ.ಡಬ್ಲ್ಯೂ. ೧೮೨೨)*

***ಸೆ. ೭ ಆರ್ಬಿಟ್ರೇಷನ್ ಮತ್ತು ಕನ್ಸಿಲಿಯೇಷನ್ ಕಾಯ್ದೆ, ೧೯೯೬– ಆರ್ಬಿಟ್ರೇಷನ್ ಕರಾರಿನ ಲಕ್ಷಣಗಳೇನು? ಅದಕ್ಕೆ ಸಹಿ ಮಾಡುವ ವ್ಯಕ್ತಿಗಳು ಯಾರಿರಬೇಕು? ಮೂರನೆ ವ್ಯಕ್ತಿಯ ಇಚ್ಛೆಯನ್ನು ಇನ್ನಿತರೆ ಇಬ್ಬರ ಮಧ್ಯದ ಆರ್ಬಿಟೇಷನ್ ಕರಾರು ಎಂದು ಕರೆಯಬಹುದೇ?***

ಈ ಮೇಲ್ಕಾಣಿಸಿದ ಕಾನೂನಿನ ಸಮಸ್ಯೆಗಳು ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದದ್ದು ಈ ಕೆಳಕಂಡ ವಾಸ್ತವಾಂಶಗಳ ಹಿನ್ನಲೆಯಲ್ಲಿ: ತಂದೆ ದುರ್ಗಾನಾರಾಯಣ ಶರ್ಮಾ ೨೧-೧೦-೨೦೦೩ ರಂದು ತಮ್ಮ ಮರಣ ಶಾಸನ (Will) ಬರೆದು, ೨೦-೧೦-೨೦೦೫ರಂದು ತೀರಿಕೊಂಡರು. ಉಯಿಲಿನಲ್ಲಿ ತಮ್ಮ ಆಸ್ತಿಯನ್ನು ತಮ್ಮಿಬ್ಬರ ಮಕ್ಕಳಿಗೆ ಹಂಚಿದ್ದರು. ಅದೆ ಉಯಿಲಿನಲ್ಲಿ ಮಕ್ಕಳ ಮಧ್ಯೆ ಆಸ್ತಿ ಹಂಚಿಕೆ ವಿಷಯದಲ್ಲಿ ವಿವಾದವೇನಾದರೂ ಉದ್ಭವಿಸಿದರೆ ಅದನ್ನು ಆರ್ಬಿಟ್ರೇಷನ್ ಮೂಲಕ ಬಗೆ ಹರಿಸಿಕೊಳ್ಳಬೇಕೆಂದು ಹೇಳಿದ್ದರು. ಮಕ್ಕಳ ಮಧ್ಯ ಆಸ್ತಿ ಹಂಚಿಕೆಗೆ ನಿಜವಾಗಿಯೂ ವಿವಾದ ಉದ್ಭವಿಸಿತು. 'ವಿವಾದಕ್ಕೆ ಸಂಬಂಧಿಸಿದ ಸಹೋದರರ ಪೈಕಿ ಒಬ್ಬರು ಆರ್ಬಿಟ್ರೇಟರರನ್ನು ನೇಮಿಸಲು ಕೋರಿ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿದರು.

ವಿವಾದ ಸರ್ವೋಚ್ಚ ನ್ಯಾಯಾಲಯದ ಅಂಗಳಕ್ಕೆ ಬಂದಾಗ ನ್ಯಾಯಾಲಯ ಉಯಿಲಿನಲ್ಲಿ ಹೇಳಿದ ಹೇಳಿಕೆ ಆ ಉಯಿಲಿನಂತೆ ಆಸ್ತಿ ಪಡೆಯುವ ವ್ಯಕ್ತಿಗಳ ಮಧ್ಯದ ಕರಾರಾಗುವುದಿಲ್ಲ, ಹೀಗಾಗಿ ಇಂಥ ಸಂದರ್ಭಗಳಲ್ಲಿ ವಿವಾದದ ವ್ಯಕ್ತಿಗಳ ಮಧ್ಯೆ ಆರ್ಬಿಟ್ರೇಷನ್ ಕರಾರಿದೆ ಎಂದು ಪರಿಭಾವಿಸಲಾಗದು, ಎಂದು ಅಭಿಪ್ರಾಯ ಪಟ್ಟು ದಾವಾ ವಜಾ ಮಾಡಿತು.

*(೨೦೧೦ ಎಐಆರ್ ಎಸ್‌ಸಿಡಬ್ಲ್ಯೂ೧೫೦೩)*

## *Just* ಮಾತ್ ಮಾತಲ್ಲಿ...

# ಮಧ್ಯಸ್ಥಿಕೆದಾರನ ವಿಶೇಷ ಗುಣಗಳು

ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಮಧ್ಯಸ್ಥಿಗೆಗಾರನ ಪಾತ್ರ ಅತೀ ಪ್ರಮುಖವಾಗಿರುತ್ತದೆ. ಮಧ್ಯಸ್ಥಿಗೆಗಾರನು ನಿಷ್ಪಕ್ಷಪಾತಿ ಯಾಗಿರಬೇಕು. ಆದರೆ ನಿಷ್ಪಕ್ಷಪಾತದ ಕುರಿತಾಗಿ ನಿಖರವಾದ ನಿಯಮಗಳಿಲ್ಲ.

ಮಧ್ಯಸ್ಥಿಗೆಗಾರನಾಗಿ ನಿಷ್ಪಕ್ಷಪಾತದ ಬಗ್ಗೆ ನನ್ನ ಅನುಭವದಲ್ಲಿ ಕಂಡುಕೊಂಡ ಕೆಲವು ಪ್ರಮುಖ ಅಂಶಗಳನ್ನು ಈ ಕೆಳಗೆ ಕ್ರೋಢೀಕರಿಸಿದ್ದೇನೆ.

ಮಧ್ಯಸ್ಥಿಗೆ ನಡೆಸುವ ಪ್ರತ್ಯೇಕ ಕೊಠಡಿಯಲ್ಲಿ ಅಳವಡಿಸಲಾದ ಕುರ್ಚಿಗಳು ಒಂದೇ ಆಕಾರ, ಒಂದೇ ಬಣ್ಣ ಮತ್ತು ಸಮಾನ ಆಸನಗಳಾಗಿರಬೇಕು.

ಮಧ್ಯಸ್ಥಿಕೆಯಲ್ಲಿ ಭಾಗವಹಿಸುವ ಉಭಯ ಪಕ್ಷಗಳನ್ನು ಎದುರು ಬದುರಾಗಿ ಮಧ್ಯಸ್ಥಿಕೆಗಾರನಿಂದ ಸಮಾನ ಅಂತರದಲ್ಲಿ ಕುಳ್ಳಿರಿಸುವ ವ್ಯವಸ್ಥೆ ಮಾಡಿರಬೇಕು.

ಮಧ್ಯಸ್ಥಿಕೆಗಾರನು ಉಭಯ ಪಾರ್ಟಿಗಳು ಮತ್ತು ಅವರ ವಕೀಲರ ಮೇಲೆ ಕಣ್ಣು ಹಾಯಿಸಬೇಕು. ಯಾವುದೇ ಪಕ್ಷ ತನ್ನ ಹೇಳಿಕೆಯನ್ನು ಮಂಡಿಸುವಾಗ ಮಧ್ಯಸ್ಥಿಕೆದಾರನ ದೃಷ್ಟಿ ಸಂಪೂರ್ಣವಾಗಿ ಆ ಪಕ್ಷಗಾರನ ಮೇಲಿರಬೇಕು.

ಮಧ್ಯಸ್ಥಿಗೆ ನಡೆಯುವ ವೇಳೆ ಮಧ್ಯಸ್ಥಿಕೆದಾರರು ತಮ್ಮ ಕಾಲ ಮೇಲೆ ಕಾಲು ಹಾಕಿ ಕುಳಿತುಕೊಳ್ಳಬಾರದು. ಅಂತೆಯೇ ಕೈಕಟ್ಟಿ ಕುಳಿತುಕೊಳ್ಳಲೂಬಾರದು. ಈ ಭಂಗಿಗಳಲ್ಲಿ ಮೊದಲನೆಯದು ಅಹಂಕಾರದ ಸಂಕೇತವಾಗಿ ತೋರಿದರೆ ಎರಡನೆಯದು ತಾತ್ಸಾರಭಾವನೆಯ ಸೂಚಕವಾಗಬಹುದು.

ಉಭಯ ಪಕ್ಷಗಳು ಕ್ರಮವಾಗಿ ತಮ್ಮ ಅಹವಾಲುಗಳನ್ನು ಮಂಢಿಸುವಾಗ ಮಧ್ಯಸ್ಥಿಕೆದಾರನು ತಲೆದೂಗುವುದಾಗಲೀ, ಹೂಂಗುಟ್ಟುವುದಾಗಲೀ ಮಾಡಬಾರದು. ಇದರಿಂದ ಅವರ ಮಾಲೆಗೆ ತನ್ನ ಸಮ್ಮತಿ ಅಥವಾ ಅಸಮ್ಮತಿ ಸೂಚಿಸಿದಂತಾಗುತ್ತದೆ.



ಎಸ್.ಎನ್. ಪ್ರಶಾಂತ ಚಂದ್ರ,
snpchandra@gmail.com

ಮಧ್ಯಸ್ಥಿಕೆದಾರನ ಉಡುವು ಗೌರವ ಯುತವಾಗಿರಬೇಕು, ಇದು ವಕೀಲರು ಧರಿಸುವ ಉಡುಪಿಗಿಂತ ಭಿನ್ನವಾಗಿರಬೇಕು. ಮಧ್ಯಸ್ಥಿಕೆದಾರನು ತನ್ನ ಘನತೆ, ಗೌರವ ಮತ್ತು ವ್ಯಕ್ತಿತ್ವವನ್ನು ಕಾಪಾಡಿಕೊಂಡರೆ ಮಾತ್ರ ಮಧ್ಯಸ್ಥಿಕೆ ಪರಿಣಾಮಕಾರಿಯಾಗ ಬಹುದು.

ಮಧ್ಯಸ್ಥಿಕೆ ಪ್ರಕ್ರಿಯೆ ನಡೆಯುತ್ತಿರುವ ವೇಳೆ ಸಂಚಾರಿ ದೂರವಾಣಿಯನ್ನು ಸಂಪೂರ್ಣವಾಗಿ ನಿಷೇಧಿಸುವುದು ಅತೀ ಅವಶ್ಯ.

ಪಕ್ಷಗಳು ಪರಸ್ಪರ ತಮ್ಮ ಸರದಿಯಂತೆ ಹೇಳಿಕೆಗಳನ್ನು ಮಂಡಿಸುತ್ತಿರುವಾಗ ಅಭ್ಯಾಸಬಲದಂತೆ ಟಿಪ್ಪಣಿಗಳನ್ನು ಬರೆದುಕೊಳ್ಳುವುದು ಸಲ್ಲ.

ಪಕ್ಷಗಳು ಹೇಳಿಕೆ ನೀಡುವಾಗ ಅವರ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಬೇಕು. ಇದರಿಂದ ಮಧ್ಯಸ್ತಿಕೆದಾರನ ಬಗ್ಗೆ ನಂಬಿಕೆ ಹುಟ್ಟುತ್ತದೆ, ಮಾತ್ರವಲ್ಲದೆ ಮಧ್ಯಸ್ತಿಕೆದಾರನಿಗೂ ಸಹ ಹೇಳಿಕೆಯ ಸತ್ಯಾಸತ್ಯತೆಗಳನ್ನು ಗ್ರಹಿಸಲು ಅನುಕೂಲವಾಗುತ್ತದೆ.

ಮಧ್ಯಸ್ಥಿಕೆದಾರನು ಸದಾ ಹಸನ್ಮುಖಿಯಾಗಿ ರಬೇಕು ತನ್ನ ಪ್ರತಿಬಿಂಬವನ್ನು ನಿಲುವುಗನ್ನಡಿಯಲ್ಲಿ ನೋಡಿ ಅಭ್ಯಾಸಮಾಡುವುದು ಒಳಿತು.

ಮಧ್ಯಸ್ಥಿಕೆ ಪ್ರಕ್ತಿಯೆಯಲ್ಲಿ ತಾಟಸ್ಥ್ಯ ಧೋರಣೆಯನ್ನು ಕಾಪಾಡುವುದು ಒಂದು ಸವಾಲೇ ಆಗಿದೆ. ಉಭಯ ಪಕ್ಷಗಳು ತಮ್ಮ ಹೇಳಿಕೆಗಳನ್ನು ಮಂಡಿಸುತ್ತಿರುವ ವೇಳೆ ಮಧ್ಯಸ್ಥಿಕೆದಾರನು ಪ್ರಚೋದನೆಗೆ ಒಳಪಟ್ಟು ತನ್ನ ಹಾವ, ಭಾವ, ಭಂಗಿಗಳಿಂದ ತನ್ನ ಸಮ್ಮತಿಯನ್ನಾಗಲೀ ಯಾ ವಿರೋಧ ವನ್ನಾಗಲೀ ಯಾವ ಸಂದರ್ಭದಲ್ಲೂ ಕೊಠಡಿಯ ಒಳಗಿರಲಿ, ಯಾ ಹೊರಗಾಗಲೀ ವ್ಯಕ್ತಪಡಿಸದೆ ತಟಸ್ಥನಾಗಿರಬೇಕಾದುದು ಅವನ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ತಾಟಸ್ಥ್ಯ ಧೋರಣೆಯನ್ನು ಪಾಲಿಸಿದಾಗ ಪಕ್ಷಗಳಲ್ಲಿ ನಂಬಿಕೆ ಮೂಡುತ್ತದೆ.

ಮಧ್ಯಸ್ಥಿಕೆ ಪ್ರಕ್ರಿಯೆ ನಡೆಯುವ ಕೋಣೆ ಅಲ್ಲದೇ ಬೇರೆ ಸ್ಥಳಗಳಲ್ಲಿ (ಕಲ್ಯಾಣಮಂಟಪ, ಪಾರ್ಟಿಹಾಲುಗಳು ನ್ಯಾಯಾಲಯ) ಪಕ್ಷಗಳು, ಅವರ ಸಂಬಂಧಿಕರು, ಅವರ ವಕೀಲರುಗಳ ಭೇಟಿಗೆ ಅವಕಾಶ ಕೊಡದೇ ಇರುವುದು ಲೇಸು. ಭೇಟಿಯ ಸಂದರ್ಭ ಬಂದಾಗ ಮಧ್ಯಸ್ಥಿಕೆ, ಮೊಕದ್ದಮೆ ಸಂಬಂಧ ಮಾತುಕತೆ ನಡೆಸಲು ಅನಾವಶ್ಯಕ ಚರ್ಚೆಗೆ ಅವಕಾಶ ಮಾಡದಿರುವುದು ಸೂಕ್ತವೆನಿಸುತ್ತದೆ.

## ಲಹರಿ

ಕೆ. ಎನ್. ಪುಟ್ಟೇಗೌಡ ವಕೀಲರು, ಲಹರಿ ಸಂಸ್ಥೆಯ ಚಿಂತನ ಮಂಥನ ಉಪನ್ಯಾಸ ಮಾಲೆಯ ೯೭ ಉಪನ್ಯಾಸ ನೀಡಿದರು. ಚಿತ್ರದಲ್ಲಿ ಲಹರಿ ಮತ್ತು ವಕೀಲರ ಸಂಘದ ಪದಾಧಿಕಾರಿಗಳನ್ನು ಕಾಣಬಹುದು.



ಕಮ್ಯುನಿಕ್ ಮತ್ತು ಸಂವಾದಕ್ಕೆ
ಚಂದಾದಾರರಾಗಲು
ಸಂಪರ್ಕಿಸಿ:
ಶ್ರೀ ಎಸ್. ಗೋಪಾಲ್
೯೪೪೮೮ ೬೪೮೨೩
ಶ್ರೀ ಅಶೋಕ್ ಕುಮಾರ್
೯೮೪೫೩ ೬೯೧೩೦
ಜಾಹೀರಾತಿಗಾಗಿ ಸಂಪರ್ಕಿಸಬೇಕಾದ ಟೆಲಿಫೋನ್ ಸಂಖ್ಯೆ:
ಶ್ರೀ ಗುರುರಾಜ ಕುಲಕರ್ಣಿ
೯೪೪೮೨೨೪೦೭೩೧